ಅದರ ಪ್ರಕಾರ ಪರೀಕ್ಷೆಗಳು ನಡೆಯುತ್ತವೆ. ಆ ಪರೀಕ್ಷೆಯಲ್ಲಿ ಎಂಥೆಂಥವರು ಆರಿಸಿ ಬರುತ್ತಾರೆ ಎಂಬ ಬಗ್ಗೆ ಅವರನ್ನು ಕೇಳಬೇಕು. ನಮಗೆ ಕೇಳಿದರೆ ಪ್ರಯೋಜನ ಇಲ್ಲ.

ಗುಲ್ಬರ್ಗ ಜಿಲ್ಲೆಯ ಹತ್ತಿಗೂಡೂರಿನಲ್ಲಿ ಬಸ್ ನಿಲ್ದಾಣದ ನಿರ್ಮಾಣ

೧೮೦೭. ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಹತ್ತಿಗೂಡೂರ ಗ್ರಾಮದವರು ಬಸ್ ನಿಲ್ದಾಣಕ್ಕೆ ಉಚಿತ ಜಮೀನನ್ನು ಒದಗಿಸಿರುವುದು ನಿಜವೇ ?

ಆ) ಈ ಜಾಗವು ಪ್ರಾಂತೀಯ ಹೆದ್ದಾರಿಯ ಮುಖ್ಯ ರಸ್ತೆಯಲ್ಲಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಇ) ಈ ಸ್ಥಳವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವಶಕ್ಕೆ ತೆಗೆದು ಕೊಂಡಿರುವರೆ ?

ಈ) ತೆಗೆದುಕೊಂಡಿದ್ದಲ್ಲಿ ಬಸ್ ನಿಲ್ದಾಣದ ಕೆಲಸವನ್ನು ಇದುವರೆವಿಗೂ ಪ್ರಾರಂಭಿಸದಿರುವುದಕ್ಕೆ ಕಾರಣವೇನು ಹಾಗೂ ಈ ಸದರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮಂತ್ರಿಗಳು) —

ಅ) ಹಣ ಪಾವತಿ ಮಾಡಿ ಪಡೆದುಕೊಳ್ಳಲಾಗಿದೆ.

ಆ) ತಿಳಿದಿದೆ.

ಇ) ಹೌದು

ಈ) ಆರ್ಥಿಕ ಕಾರಣಗಳಿಂದಾಗಿ ಈ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದಿಲ್ಲ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಇಲ್ಲಿ ಜಮೀನನ್ನು ಯಾವಾಗ ತೆಗೆದುಕೊಳ್ಳಲಾಯಿತಂ ಮತ್ತು ಎಷ್ಟು ಹಣಕ್ಕೆ ತೆಗೆದುಕೊಳ್ಳಲಾಯಿತು ಎಂಬುದನ್ನು ತಿಳಿಸಬೇಕು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಒಂದು ಎಕರೆ ೬ ಗುಂಟೆ ಜಮೀನನ್ನು ೨೨೧೦ ರೂಪಾಯಿಗಳಿಗೆ ಪಡೆದು ಸಾರಿಗೆ ಸಂಸ್ಥೆ ವಶಕ್ಕೆ ಕೊಡಲಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.— ಮೊದಲು ಸ್ಥಳ ಕೊಟ್ಟರೆ ಬಸ್ ನಿಲ್ದಾಣ ಕಟ್ಟುತ್ತೇವೆಂದು ಹೇಳಿದ್ದರು. ಈಗ ಜಾಗ ಕೊಟ್ಟಮೇಲೂ ಸಹ ಈ ಕೆಲಸಕ್ಕೆ ಹಣ ಒದಗಿಸಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ದಿನವೂ ನೂರಾರು ಬಸ್‌ಗಳು ಹಾದು ಹೋಗುತ್ತವೆ. ಆದರೆ ಅಲ್ಲಿನ ಜನರಿಗೆ ಯಾವ ಅನುಕೂಲವೂ ಇಲ್ಲದ ಕಾರಣ ಯಾವಾಗ ಈ ಕೆಲಸವನ್ನು ಮುಗಿಸುತ್ತಾರೆಂಬ ಬಗ್ಗೆ ಭರವಸೆಯನ್ನು ಕೊಡಬೇಕು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಇಂತಹ ಅನೇಕ ಪಟ್ಟಿಣಗಳಿವೆ. ಬಸ್ ನಿಲ್ದಾಣಗಳನ್ನು ಕಟ್ಟಿಸಲು ನಮ್ಮ ಸಾರಿಗೆ ಸಂಸ್ಥೆ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೆ ಈ ವರ್ಷ ಈ ಸಿವಿಲ್ ಇಂಜಿನಿಯರಿಂಗ್ ವರ್ಕ್ಸ್‌ಗಾಗಿ ೧೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದಕ್ಕೂ ಹೆಚ್ಚು ಹಣ ಖರ್ಚು ಮಾಡಬೇಕೆಂದರೆ ಕಷ್ಟವಾಗುತ್ತದೆ ಒಂದೇ ಸಲ ಎಲ್ಲ ಕಡೆ ಬಸ್ ನಿಲ್ದಾಣಗಳನ್ನು ಕಟ್ಟಿಸಬೇಕೆಂದರೆ ಕಷ್ಟವಾಗುತ್ತದೆ. ಈಗ ಇಲ್ಲಿ ನಾವು ಜಾಗವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಹಣ ಕೊಟ್ಟಿದ್ದೇವೆ. ಮುಂದಿನ ವರ್ಷದಲ್ಲಿ ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡಲಂ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಶ್ರೀ ಕಾನಡೆಯವರೇ, ನಿಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. (ಶ್ರೀ ಬಸವರಾಜ ಪಾಟೀಲ ಅನ್ವರಿ ಅವರನ್ನು ಉದ್ದೇಶಿಸಿ) ಪಾಟೀಲರೇ, ನೀವು ಯಾವಾಗ ಉತ್ತರ ಕೊಡುತ್ತೀರಿ ? ೭ನೇ ತಾರೀಕಿಗೋ ಅಥವಾ ೧೫ನೇ ತಾರೀಕಿಗೋ ?

ಶ್ರೀ ಬಸವರಾಜ ಪಾಟೀಲ ಅನ್ವರಿ (ಆಹಾರ ಮತ್ತು ನಾಗರಿಕ ಪೂರೈಕೆ ರಾಜ್ಯ ಸಚಿವರು) — ತಾವು ಯಾವಾಗ ಹಾಕುತ್ತೀರಿ, ಆವಾಗ ಉತ್ತರ ಕೊಡುತ್ತೇನೆ.

ಶ್ರೀ ಗೋಪಾಲ ಮಂಕಾಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಇದು ಹೀಗೆ ಮುಂದೂಡಲಾಗುತ್ತಿರುವುದು ನನ್ನ ೧೭ನೇ ಪ್ರಶ್ನೆ. ಯಾವುದಕ್ಕಾದರೂ ತಾವು ಉತ್ತರ ಕೊಡಿಸಿದ್ದೀರಾ ?

ಅಧ್ಯಕ್ಷರು.—ಶ್ರೀ ಪಾಟೀಲರೇ, ತಾವು ಏಕೆ ಇಷ್ಟು ಹಿಂದೆ ಬಿದ್ದಿದ್ದೀರಿ ?

ಶ್ರೀ ಬಸವರಾಜ ಪಾಟೀಲ ಅನ್ವರಿ.—ಮುಂದಿನ ವಾರ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು.—ಶ್ರೀ ಕಾನಡೆಯವರೇ ನೀವು ಕುಳಿತುಕೊಳ್ಳಿ. ನಿಮಗೆ ನಾನು ಉತ್ತರ ಕೊಡಿಸುತ್ತೇನೆ.

ಹೆಂಡ ಮಾರಾಟದ ನಿಷೇಧದ ಬಗ್ಗೆ

೧೭೫೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಂಡದ ಮಾರಾಟವನ್ನು ನಿಷೇದಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಜಿಲ್ಲೆಗಳು ಎಷ್ಟು ?

ಆ) ಶಿಫಾರಸ್ಸು ಮಾಡಿರುವುದಕ್ಕೆ ಕಾರಣಗಳಾವುವು ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಡಿ. ಬಿ. ಇನಾಂದಾರ್ (ಆಬಕಾರಿ ಸಚಿವರು).—

ಅ) ಬೀದರ್, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಮೈಸೂರು ಇಡೀ ಜಿಲ್ಲೆಗಳಲ್ಲೂ ಹಾಗೂ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಮತ್ತು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಸಿದ್ದಾಪುರ, ಅಂಕೋಲ, ಸಿರ್ಸಿ, ಮುಂಡಗೋಡ್, ಸೂಪ, ಕಾರವಾರ ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಶೇಂದಿಯ ಮಾರಾಟವನ್ನು ನಿಷೇದಿಸಿದೆ.

ಆ) ಶೇಂದಿ ಉತ್ಪಾದನೆ ಮಾಡುವ ಮರಗಳ ಕೊರತೆಯ ಕಾರಣ ಹಾಗೂ ಶೇಂದಿ ಕಲಬೆರಕೆಯನ್ನು ತಡೆಗಟ್ಟುವ ಸಲುವಾಗಿ.

ಇ) ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವಂತೆ ಪ್ರಶ್ನೆ (ಅ)ನ ಉತ್ತರದಲ್ಲಿ ಸೂಚಿಸಿಲಾಗಿರುವ ವಿವಿಧ ಜಿಲ್ಲೆಗಳು ತಾಲ್ಲೂಕುಗಳಲ್ಲಿ ದಿನಾಂಕ ೧-೭-೧೯೮೮ರಿಂದ ಶೇಂದಿ ಮಾರಾಟವನ್ನು ನಿಷೇದಿಸಿ ಅಧಿಸೂಚನೆಯನ್ನು ಸರ್ಕಾರವು ಹೊರಡಿಸಿದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ೧-೭-೧೯೮೮ರಿಂದ ಕೆಲವು ಜಿಲ್ಲೆಗಳಲ್ಲಿ ಶೇಂದಿ ಮಾರಾಟವನ್ನು ನಿಷೇಧ ಮಾಡುತ್ತೇವೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಶೇಂದಿ ಮಾರಾಟವನ್ನು ನಿಷೇಧ ಮಾಡಲಿಕ್ಕೆ ಏಕೆ ಮನಸ್ಸು ಮಾಡಲಿಲ್ಲ? ನಿಷೇಧ ಮಾಡದೇ ಇರತಕ್ಕಂಥ ಈ ಜಿಲ್ಲೆಗಳಲ್ಲಿ ಏನು ಕಲಬೆರಕೆ ಇಲ್ಲವೆಂದು ಭಾವಿಸುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಕೆಲವೊಂದು ಜಿಲ್ಲೆಗಳಲ್ಲಿ ನಾವು ಇನ್‌ಸ್ಪೆಕ್ಷನ್ ಮಾಡುತ್ತಿದ್ದೇವೆ. ಕಲಬೆರಕೆಯಾಗಿದೆ. ಎಂದು ಎಲ್ಲೆಲ್ಲಿ ಕಂಡು ಬಂದಿದೆ ಮತ್ತು ಎಲ್ಲೆಲ್ಲಿ ಮರಗಳ ಸಂಖ್ಯೆ ಕಡಿಮೆಯಾಗಿದೆ ಅಲ್ಲಿ ಶೇಂದಿ ವ್ಯಾಪಾರವನ್ನು ಫೇಸ್ ಆಫ್ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ. ಕೆಲವು ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಈ ವರ್ಷ ಮಾಡಿದ್ದೇವೆ. ಮುಂದಿನ ವರ್ಷ ಉಳಿದ ಕಡೆಗಳಲ್ಲಿ ಮಾಡಲಾಗುವುದು. ಇದನ್ನು ಹಂತಹಂತವಾಗಿ ಮಾಡುತ್ತಿದ್ದೇವೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಕೆಲವು ಜಿಲ್ಲೆಗಳಲ್ಲಿ ನಿಷೇಧವನ್ನು ಜಾರಿಗೆ ತಂದು ಉಳಿದ ಜಿಲ್ಲೆಗಳನ್ನು ಏನು ಕೈಬಿಟ್ಟಿದ್ದೀರಿ ಇದರಿಂದ ನನಗೆ ಸಂಶಯ ಉಂಟಾಗುತ್ತಿದೆ. ಹಿಂದೆ ಮಾನ್ಯ ಸಚಿವರಾದ ಶ್ರೀ ಜೆ. ಹೆಚ್. ಪಟೀಲರು ಈ ಸದನದಲ್ಲಿ ಹೇಳಿದ್ದರು ಏನೆಂದರೆ ಕಂಡಿತಕ್ಕೆ